Questions for Answers on the Day (but not taken up)

M. S. R. T. C. BUSES FROM BASAVAKALYAN TALUK HEAD-QUARTER TO BIDAR

140. Sri Bapu Rao Ananda Rao (Basavakalyan).— Will the Minister for Labour be pleased to state.—

(a) whether the Government has received any representation to ply direct M. S. R. T. C. buses from Basavakalyan Taluk Head-Quarter to Bidar *via* Hulsoor, Bhalki and Basavakalyan to Gulbarga *via* Matala;

(b) if so, the steps taken in the matter ?

Sri Azeez Sait (Minister for Labour).—

(a) Yes.

(b) Services cannot be operated since the route lies in a non-nationalised sector.

CALLING ATTENTION TO MATTERS OF URGENT PUBLIC IMPORTANCE

(i) re.— Strike by the non-teaching staff of the Karnataka Regional Engineering College, Suratkal.

Sri Kagodu Thimmappa (Sagar).— I call the attention of the Minister for Education to the strike by the non-teaching staff of the Karnataka Regional Engineering College Surathkal, South Kanara District.

Sri A. R. Badarinarayan (Minister for Education).— Sir, I make the following Statement.—

The non-teaching staff i. e., staff working in the work-shop, Laboratories and Ministerial staff of the Karnatak Regional Engineering College, Surathkal are urging for revision of pay scales to be on par with the Central Government pay scales with effect from July, 1963. The Board of Governor's of the Regional Engineering College, Surathkal, have appointed a sub-Committee to go into this question and accordingly the Sub-Committee which met on 8th and 9th of this month have also heard the grievances of the non-teaching staff of the Institute and the Sub-Committee's report is to be now placed before the Board of Governors

which is scheduled to meet on 21st of this month. The Regional Engineering College at Surthkal is jointly sponsored by the Government of India and the State Government and the Government of India is meeting 100% of the non-recurring cost and the recurring cost is being shared in the ratio of 50:50. The non-teaching staff of this institution are at present in the pay scales and privileges as are applicable to similar staff in the Department of Technical Education in Mysore State. Since the recurring cost is shared between the Government of India and the Government of Mysore, for any revision of the pay scales prior consent of the Government of India would also be necessary. However, the report of the Board of Governors which is due to meet on 21st of this month is awaited.

ಶ್ರೀ ಕೆ. ತಿಮ್ಮಪ್ಪ.— ಸ್ವಾಮಿ ನಾನ್ ಟೀಚಿಂಗ ಸ್ಟ್ಯಾಫಗೆ ಕೊಟ್ಟಿರುವ ಪೇ ಸ್ಕೇಲ್ ಕಡಿಮೆ. ಈ ರೀತಿ ಕಡಿಮೆ ಸ್ಕೇಲ್ ಕೊಟ್ಟಿರುವುದಕ್ಕೆ ಕಾರಣವೇನು?

ಶ್ರೀ ಎ. ಆರ್. ಬದರೀನಾರಾಯಣ.—ಕೇಂದ್ರ ಸರಕಾರದ ಸ್ಕೇಲನ್ನು ಟೀಚಿಂಗ ಸ್ಟ್ಯಾಫಿಗೆ ಮಾತ್ರ ಕೊಟ್ಟಿದೆ; ನಾನ್ ಟೀಚಿಂಗ ಸ್ಟ್ಯಾಫಿಗೆ ಕೊಟ್ಟಿಲ್ಲ. ಆದುದರಿಂದ ಯಾರಿಗೆ ಕೊಟ್ಟಿಲ್ಲವೋ ಅವರು ತಮಗೂ ಅದನ್ನು ಕೊಡಬೇಕೆಂದು ಕೇಳುತ್ತಿದ್ದಾರೆ. ಈ ಪ್ರಶ್ನೆ ಬೋರ್ಡ್ ಆಫ್ ಗವರ್ನರ್ಸ್ ಮುಂದಿದೆ.

They are considering it. The implications are that the Government of Mysore and Central Government if they agree, have to bear the cost that would be incurred.

ಶ್ರೀ ಬಿ. ವಿ. ಕಕ್ಕಿಲಾಯ.— ಮಂತ್ರಿಗಳ ಹೇಳಿಕೆ ನೋಡಿದರೆ ಈಗ ಈ ಪ್ರಶ್ನೆಯ ಬಗ್ಗೆ ಪರಿಶೀಲನೆ ಆರಂಭವಾಗಿರುವಹಾಗೆ ಕಾಣುವುದು. ಇದಕ್ಕೆ ಸಂಬಂಧ ಪಟ್ಟ ಎಲ್ಲಾ ಫೈಲುಗಳನ್ನೂ ನೋಡಿದ್ದೀರಾ? ೧೯೬೩ನೆಯ ಜುಲೈನಿಂದ ಕೇಂದ್ರ ಸರಕಾರದ ಪೇ ಸ್ಕೇಲನ್ನು ಕೊಡಬೇಕೆಂದು ೬೩ ರಲ್ಲಿ ಬೋರ್ಡ್ ಆಫ್ ಗವರ್ನರ್ಸ್ ತೀರ್ಮಾನ ಮಾಡಿ ಮಿನಿಟ್ಸ್‌ನಲ್ಲಿ ಬರೆದಿದ್ದಾರೆ, ಅದು ಕಾರ್ಯರೂಪಕ್ಕೆ ಬಂದಿಲ್ಲ. ಇದೊಂದು ವಿಚಾರ.

ಇನ್ನು ಎರಡನೇಯದಾಗಿ ಅಲ್ಲಿ ಈಗಾಗಲೆ ನಾನ್ ಟೀಚಿಂಗ್ ಸ್ಟ್ಯಾಫಿಗೆ ಅಂದರೆ ರಿಜಿಷ್ಟ್ರಾರ್, ಅಸಿಸ್ಟೆಂಟ್ ರಿಜಿಷ್ಟ್ರಾರ್ ಮತ್ತು ಲೈಬ್ರೇರಿಯನ್ ಇವರೆಲ್ಲರಿಗೂ ಉನ್ನತ ಮಟ್ಟದ ಸೆಂಟ್ರಲ್ ಗೌರ್ನಮೆಂಟಿನ್ ಸ್ಕೇಲುಗಳನ್ನು ಕೊಡುತ್ತಿದ್ದಾರೆ. ಹೀಗೆ ಅಲ್ಲಿ ಕೆಲವರಿಗೆ ಉನ್ನತಮಟ್ಟದ ಸಂಬಳದ ಶ್ರೇಣಿಗಳನ್ನು ಕೊಟ್ಟು ಇನ್ನು ಕೆಲವರಿಗೆ ಕೊಡದೆ ಪಕ್ಷಪಾತಭಾವನೆಯನ್ನು ತೋರಿಸುತ್ತಿರುವುದು ಮಾನ್ಯ ಸಚಿವರ

ಗಮನಕ್ಕೆ ಬಂದಿದೆಯೆ? ಮತ್ತು ಹಿಂದೆ ೧೯೬೩ರಲ್ಲಿ ಆ ಬೋರ್ಡ ಆಫ್ ಮ್ಯಾನೇಜಮೆಂಟನವರು ಏನೊಂದು ತೀರ್ಮಾನ ತೆಗೆದುಕೊಂಡಿದ್ದರು ಅದನ್ನೀಗ ಅವರು ಜಾರಿಗೆ ತರುವುದಕ್ಕೆ ಒಪ್ಪುತ್ತಿಲ್ಲ ಎಂಬುದು ಮಾನ್ಯ ಸಚಿವರ ಗಮನಕ್ಕೆ ಬಂದಿದೆಯೆ ?

ಶ್ರೀ ಎ. ಆರ್. ಬದರೀನಾರಾಯಣ.—೧೯೬೩ರಲ್ಲಿ ಎ.ಐ.ಸಿ.ಟಿ.ಇ. ಸ್ಕೇಲನ್ನು ನಮಗೂ ಕೊಡಬೇಕೆಂಬುದಾಗಿ ಅವರಿಂದ ಒಂದು ರೆಫರ್‌ನ್ಸ್ ಬಂದಿತ್ತು. ಆದರೆ ಆ ಸ್ಕೇಲನ್ನು ಅವರಿಗೆ ಕೊಡಬೇಕೇ ಅಥವಾ ಬೇಡವೇ ಎಂಬ ವಿಷಯ ಆ ಬೋರ್ಡ ಆಫ್ ಮ್ಯಾನೇಜಮೆಂಟನವರ ಮುಂದೆ ಪರಿಶೀಲನೆಗೆ ಬಂದಿತ್ತು. ಆದರೆ ಆ ಕಮೀಟಿಯವರು ಆ ವಿಷಯವನ್ನು ಪರಿಶೀಲನೆ ಮಾಡುವುದರೊಳಗೆ ಅಲ್ಲಿ ಹ್ಯಾಂಡ್ಸ್‌ಗಳ ಬದಲಾವಣೆಯಾಯಿತು. ಆದರೆ ಅಷ್ಟರಲ್ಲೇ ತುಕ್ಕೋಳ್ ಪೇ ಕಮಿಷನ್ ಪ್ರಾರಂಭವಾಯಿತೋ ಆಗ ಅವರೂ ಸಹಾ ಆ ಎ.ಐ.ಸಿ.ಟಿ.ಇ. ಸ್ಕೇಲನ್ನು ಕೊಡಬೇಕೆಂಬ ಒತ್ತಾಯ ಮಾಡಲಿಲ್ಲ. ಈ ತುಕ್ಕೋಳ್ ಸಮಿತಿಯ ತೀರ್ಮಾನವನ್ನೆ ಒಪ್ಪಿಕೊಂಡು ಸುಮ್ಮನಾಗಿದ್ದವರು ಈಗ ೬—೭ ವರ್ಷಗಳು ಕಳೆದ ನಂತರ ಆ ಹಿಂದಿನ ಎ.ಐ.ಸಿ.ಟಿ.ಇ. ಸ್ಕೇಲನ್ನು ಕೊಡಬೇಕೆಂದು ಈಗ ಕೇಳುವುದಕ್ಕೆ ಪ್ರಾರಂಭಮಾಡಿದ್ದಾರೆ. ಅದಕ್ಕಾಗಿ ಈಗ ಆ ಬೋರ್ಡಆಫ್ ಮ್ಯಾನೇಜಮೆಂಟನವರು ಒಂದು ಸಬ್ ಕಮೀಟಿಯನ್ನು ನೇಮಕ ಮಾಡಿದ್ದಾರೆ. ಆ ಕಮೀಟಿ ಕೆಲಸವನ್ನು ಮುಂದುವರಿಸುತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್—ಬೇರೆ ರಾಜ್ಯಗಳಲ್ಲಿ ಈ ನಾನ್ ಟೀಚಿಂಗ್ ಸ್ಟ್ಯಾಫಿಗೆಲ್ಲಾ ಕೇಂದ್ರ ಸರ್ಕಾರದ ಸ್ಕೇಲುಗಳನ್ನು ಕೊಟ್ಟಿದ್ದಾರೆ. ಇಲ್ಲಿ ನಮ್ಮ ಸರ್ಕಾರವೇಕೆ ಈ ತಾರತಮ್ಯ ಮಾಡುತ್ತಿದೆ ? ಈಗಲಾದರೂ ಕೊಡುವುದಕ್ಕೆ ಒಪ್ಪಿದ್ದಾರೆಯೆ ? ಒಪ್ಪಿದ್ದರೆ ಎಂದಿನಿಂದ ಅದನ್ನು ಕೊಡುತ್ತಾರೆ ?

ಶ್ರೀ ಎ. ಆರ್. ಬದರೀನಾರಾಯಣ.—ಬೇರೆ ರಾಜ್ಯಗಳಲ್ಲಿ ಕೆಲವು ಕೊಡುತ್ತಿವೆ, ಇನ್ನು ಕೆಲವು ಕೊಡುತ್ತಿಲ್ಲ. ಈಗ ಆ ಸಬ್‌ಕಮೀಟಿ ಈ ವಿಚಾರದಲ್ಲಿ ತನ್ನ ವರದಿಯನ್ನು ಬೋರ್ಡಆಫ್ ಮ್ಯಾನೇಜಮೆಂಟಿಗೆ ಒಪ್ಪಿಸಿದೆ. ವಿಚಾರ ಪರಿಶೀಲನೆಯ ಸ್ಟೇಜಿನಲ್ಲಿದೆ.

ಶ್ರೀ ಎಂ. ಎಸ್. ಕೃಷ್ಣನ್—ಅಲ್ಲಿ ಆ ಬೋರ್ಡಆಫ್ ಡೈರೆಕ್ಟರು ಏನು ತೀರ್ಮಾನವನ್ನು ತೆಗೆದುಕೊಳ್ಳುತಾರೋ ಅದನ್ನು ಸರ್ಕಾರದವರು ಜಾರಿಗೆ ತರುತ್ತಾರೆಯೆ ?

ಶ್ರೀ ಎ. ಆರ್. ಬದರೀನಾರಾಯಣ.—ಅವರು ಏನು ತೀರ್ಮಾನ ತೆಗೆದು ಕೊಳ್ಳುತ್ತಾರೆ ಎಂಬುದನ್ನು ಕಾದು ನೋಡೋಣ.